# ವಾರ್ತಾ ವಿಶ್ಲೇಷಣೆ

## ಮಾದರಿ ಕೈಂಕರ್ಯ

ಒಂದು ಜನಾಂಗದ ಧರ್ಮನಿಷ್ಠೆ ಮತ್ತು ಶ್ರದ್ಧೆಗಳು ರಚನಾತ್ಮಕವಾಗಿ ಅಭಿವ್ಯಕ್ತಗೊಂಡಾಗ ಎಂತಹ ಪವಾಡಗಳೂ ಸಹ ಸಂಭವಿಸಲು ಸಾಧ್ಯ ಎಂಬುದಕ್ಕೆ ಅಮೃತಸರದಲ್ಲಿನ ಸಿಖ್ಖ್ ಧರ್ಮಾವಲಂಬಿಗಳ ಕರಸೇವೆ ಉತ್ತಮ ನಿದರ್ಶನವಾಗಿದೆ. ಕಳೆದ ಮಾರ್ಚ್ ಕೊನೆಯ ವಾರದಲ್ಲಿ ಸುವರ್ಣಮಂದಿರದಲ್ಲಿ ಲಕ್ಷಾಂತರ ಸಿಖ್ ಅನುಯಾಯಿಗಳು ಕೈಗೊಂಡ ಕರಸೇವೆ ಪವಾಡಸದೃಶ ಎಂದು ಅಮೆರಿಕದಲ್ಲಿರುವ ಇಂಜಿನಿಯರ್ ವಿಶಾಲ್ ರಾಂಬಾಣಿ ಅವರು ಬಣ್ಣಿಸಿರುವುದು ಉತ್ಪ್ರೇಕ್ಷೆಯೇನಲ್ಲ. ೫೬೦ x ೫೦೪ ಅಡಿ ವಿಸ್ತೀರ್ಣದ ಈ ವಿಶಾಲ ಸರೋವರದಲ್ಲಿ ೩ ಅಡಿಗಳ ಆಳದ ಹೂಳು ಸುಮಾರು ೩೦ ವರ್ಷಗಳಿಂದಲೂ ಶೇಖರಗೊಂಡಿತ್ತು. ಈ ಭಯಂಕರ ಪ್ರಮಾಣದ ಹೂಳನ್ನೆತ್ತಲು ನಿಯೋಜಿತರಾದ ಅಮೆರಿಕದ ಇಂಜಿನಿಯರ್ ಮೈಕೇಲ್ ಡೊಗ್ಲಾಸ್ ತಮ್ಮ ದೈತ್ಯಾಕಾರದ ಯಂತ್ರಗಳು ಹಾಗೂ ತಾಂತ್ರಿಕ ತಂಡದೊಡನೆ ಸಿದ್ಧವಾಗುತ್ತಿದ್ದರೆ ಆ ವಿಶಾಲ ಸರೋವರ ಕೇವಲ ಹನ್ನೆರಡೇ ಗಂಟೆಗಳಲ್ಲಿ ಹೂಳಿನಿಂದ ಸ್ವಚ್ಛಗೊಂಡ ಅಚ್ಚರಿಗೊಳಿಸುವ ಸುದ್ದಿ ಅವರಿಗೆ ತಲುಪಿತಂತೆ. "ಏನಾಶ್ಚರ್ಯ! ಯಾವುದೇ ಆಧುನಿಕ ಯಂತ್ರಗಳ ಸಹಾಯವಿಲ್ಲದೆ ಸ್ವಚ್ಛಗೊಂಡಿರುವುದು ಒಂದು ಪವಾಡವೇ ಸರಿ" ಎಂದು ಮೈಕೇಲ್ ಡೊಗ್ಲಾಸ್ ಉದ್ಗರಿಸುವಂತಾಯಿತಂತೆ. ಆದರೆ ಈ ಪವಾಡವನ್ನು ಮಾಡಿದವರು ಯಾವ ಬಾಬಾನೂ ಅಲ್ಲ. ಸಾಮಾನ್ಯ ಮನುಷ್ಯರೇ, ಆದರೆ ತಾವು ಜನ್ಮತಳೆದ ಧರ್ಮದ ಮೇಲಿನ ಗೌರವ, ಹೆಮ್ಮೆ, ಅಭಿಮಾನಗಳಿಂದ ತುಂಬಿದ ಜನರು. ಹತ್ತು ಲಕ್ಷಕ್ಕೂ ಹೆಚ್ಚಿನ ಸಿಖ್ಖರು ಆ ಸರೋವರದ ಹೂಳನ್ನೆತ್ತಿ ಶುಚಿಗೊಳಿಸುವ ಶ್ರಮದಾನ ಮಾಡುವುದು ತಮ್ಮ ಜೀವಾವಧಿಯಲ್ಲೇ ದೊರಕಿರುವ ಅಪೂರ್ವ ಅವಕಾಶವೆಂದು ಭಾವಿಸಿ ಜಗತ್ತಿನ ಎಲ್ಲೆಡೆಯಿಂದಲೂ ಸಿಖ್ಖರ ಪವಿತ್ರ ಸ್ಥಳವಾದ ಸ್ವರ್ಣಮಂದಿರಕ್ಕೆ ತೀರ್ಥಯಾತ್ರೆಗಾಗಿ ಬಂದರು. ಅಷ್ಟೇ ಅಲ್ಲ, ಸ್ವಲ್ಪ ವಿಳಂಬಿಸಿ ಬಂದವರು ಹೂಳನ್ನೆತ್ತುವ ಅವಕಾಶದಿಂದ ವಂಚಿತರಾಗಿ ನಿರಾಸೆಯಿಂದ ಹಿಂತಿರುಗಬೇಕಾಯಿತಂತೆ.

ಇಂದಿನ ದಿನಗಳ ಚುನಾವಣೆ, ಕ್ರಿಕೆಟ್ ಭರಾಟೆಗಳ ಅಬ್ಬರದಲ್ಲಿ ಈ ಸಣ್ಣ ಘಟನೆ ನಮ್ಮ ಗಮನವನ್ನು ಸೆಳೆದಿರದಿದ್ದರೆ ಆಶ್ಚರ್ಯವಿಲ್ಲ. ಆದರೆ ಸಿಖ್ಖರು ತಮ್ಮ ಪವಿತ್ರ ದೇವಾಲಯದ ಸರೋವರದ ಹೂಳನ್ನೆತ್ತಿದ ಘಟನೆ ಭಾರತೀಯ ಸಾಮಾಜಿಕ ಜೀವನದ ಅನೇಕ ವಾಸ್ತವಾಂಶಗಳ ಕಡೆ ನಮ್ಮ ಕಣ್ಣು ತೆರೆಸುವಂತಾಗಬೇಕು. ಭಾರತೀಯರ ಜನಜೀವನದಲ್ಲಿ ಯಾವುದೇ ಪರಿಣಾಮಕಾರಿಯಾದ ಬದಲಾವಣೆಯಾಗಬೇಕಾದರೂ ಅದು ಧರ್ಮದ ಮೂಲಕವೇ ಆಗಬೇಕು, ಕಾರಣ ಧರ್ಮವೇ ಭಾರತೀಯರ ಜೀವಾಳ ಎಂದು ನೂರು ವರ್ಷಗಳಿಗೂ ಹಿಂದೆಯೇ ಸ್ವಾಮಿ ವಿವೇಕಾನಂದರು ಒತ್ತಿ ಹೇಳಿದ್ದರು. ಜನರಲ್ಲಿ ಆತ್ಮಜಾಗೃತಿಯನ್ನುಂಟುಮಾಡಿ, ತಮ್ಮ ಧರ್ಮದ ಸಾಂಪ್ರದಾಯಿಕ ಮೌಲ್ಯಗಳ ಪರಂಪರೆಯ ಬಗ್ಗೆ ಅರಿವನ್ನುಂಟುಮಾಡಿ ಪಳೆಯುಳಿಕೆಗಳಂತೆ ಬಿದ್ದಿರುವ ದೇವಾಲಯಗಳು, ಬಾವಿಗಳು, ಕೆರೆಗಳು ಇವುಗಳ ಜೀರ್ಣೋದ್ಧಾರ ಮಾಡುವ ಸೇವಾಮನೋಭಾವವನ್ನು ಮೂಡಿಸುವ ಬಲವಾದ ಪ್ರೇರಣೆಗಳು ನಮಗಿಂದು ಬೇಕಾಗಿದೆ.

ಹಿಂದೂಧರ್ಮದಲ್ಲಂತೂ ಆಗಾಗ ನಡೆಯುವ ಕುಂಭಮೇಳಗಳ ಮಾತಿರಲಿ, ಇಲ್ಲಿರುವ ಒಂದೊಂದು ಕೆರೆಯೂ ಜನರ ಧಾರ್ಮಿಕ ಮನೋಭಾವನೆಗಳೊಂದಿಗೆ ತಳಕು ಹಾಕಿಕೊಂಡಿದೆ. ಇವೆಲ್ಲವೂ ಮನುಷ್ಯನಿಗೂ ನೀರಿಗೂ ಇರುವ ಒಂದು ದೈವಿಕವಾದ ಸಂಬಂಧಕ್ಕೆ ದ್ಯೋತಕವಾಗಿವೆ. ಹಳ್ಳಿಗಳಲ್ಲಿನ ದೇವಸ್ಥಾನಗಳಂತೂ ಎಂತಹ ನಿರ್ಲಕ್ಷ್ಯಕ್ಕೆ ಒಳಗಾಗಿವೆ ಎಂಬುದನ್ನು ಯಾವುದೇ ಒಂದು ಹಳ್ಳಿಗೆ ಭೇಟಿಯಿತ್ತರೂ ತಿಳಿಯಬಹುದು. ಕೃತಕವಾದ ಜಾತ್ಯತೀತತೆ ಈ ದೇಶದ ಸಾಂಸ್ಕೃತಿಕ ಸಂಪತ್ತಿನ ಕಡೆ ಜನತೆಯ ಅವಜ್ಞತೆಯನ್ನು ಹೆಚ್ಚಿಸಿದೆ. ಹಳ್ಳಿಗರ ಜನಜೀವನದ ಅವಿಭಾಜ್ಯ ಅಂಗವಾಗಿದ್ದ ದೇವಾಲಯಗಳನ್ನು ಸೋಂಬೇರಿಗಳ ಕಟ್ಟೆಯಾಗಿ, ಹೊಲಸುಗೊಳಿಸಬಹುದಾದ ಸಾರ್ವಜನಿಕ ಸ್ಥಳಗಳಾಗಿರುವುದು ಈ ನಾಡಿನ ಒಂದು ದುರಂತ.

ಭಾರತೀಯ ಸಮಾಜದಲ್ಲಿ ಒಂದು ಹಳ್ಳಿಯೆಂದರೆ ದೇವಸ್ಥಾನ ಹೇಗೆ ಬೇಕೇ ಬೇಕೋ ಹಾಗೆಯೇ ಒಂದು ಕೆರೆಯೂ ಅನಿವಾರ್ಯವಾಗಿತ್ತು. ಕೆರೆಗಳ ನಿರ್ಮಾಣ ನಿರ್ವಹಣೆಗಾಗಿ ಒಂದು ಬಲಿಷ್ಠ ವ್ಯವಸ್ಥೆಯಿತ್ತು. ಕಳೆದ ಶತಮಾನದ ಆರಂಭಕ್ಕೂ ಮುನ್ನ ಕೆರೆಗಳು ಬರಗಾಲದಲ್ಲೂ ಸಹ ಒಂದು ಗುಟುಕು ನೀರನ್ನು ಕೊಡುತ್ತಿದ್ದುವು. ಆದರೆ ಇತ್ತೀಚೆಗೆ ಎಲ್ಲಿಂದ ಎಲ್ಲಿ ಪ್ರಯಾಣಿಸಿ ನೋಡಿದರೂ ಕೆರೆಗಳಲ್ಲಿ ಭಯಂಕರ ಪ್ರಮಾಣದ ಹೂಳು ತುಂಬಿಕೊಂಡಿರುವುದರಿಂದ ನೀರು ಇಲ್ಲದಂತಾಗಿದೆ. ಒಂದು ವೇಳೆ ಮಳೆ ಬಂದರೂ ಕೆರೆಗಳು ಬೇಗ ತುಂಬಿ ಬೇಗ ಖಾಲಿಯಾಗುತ್ತವೆ. ಅಲ್ಲದೇ ಕೆರೆ ತುಂಬಿ ಉಕ್ಕುವಾಗ ಮಣ್ಣು ಕೂಡ ಪ್ರವಾಹದೋಪಾದಿಯಲ್ಲಿ ಕೊಚ್ಚಿಕೊಂಡು ಹೋಗುತ್ತದೆ. ಈ ರೀತಿಯ ನಷ್ಟ ತಡೆಯಲು ಮಾರ್ಗ ಒಂದೇ: ಕೆರೆಗಳ ಹೂಳೆತ್ತಿ, ಅದರಲ್ಲಿ ಸಾಧ್ಯವಾದಷ್ಟು ನೀರು ಉಳಿಯುವಂತೆ ಮಾಡಬೇಕು.

ಹಳ್ಳಿನಿವಾಸಿಗಳ ಬಲಿಷ್ಠವಾದ ಸ್ವಾವಲಂಬನ ಪದ್ಧತಿಯನ್ನು ಬುಡಮೇಲುಮಾಡಿ ಪ್ರತಿಯೊಂದಕ್ಕೂ ಸರ್ಕಾರದ ಕಡೆ ನೋಡುವಂತೆ ಮಾಡಿರುವುದು ಬ್ರಿಟಿಷರು ಈ ರಾಷ್ಟ್ರಕ್ಕೆ ಬಿಟ್ಟುಹೋದ ಅನಿಷ್ಟ ವೈರಸ್‌ಗಳಲ್ಲಿ ಒಂದು. ಕೆರೆಗಳ ನಿರ್ವಹಣೆ ಸರ್ಕಾರದ ಕೆಲಸವೆಂದು ಮೈಗಳ್ಳರಾಗದೆ ನಮ್ಮ ಪೂರ್ವಜರು ಶತಶತಮಾನಗಳಿಂದ ಉಳಿಸಿಕೊಂಡು ಬೆಳೆಸಿಕೊಂಡು ಬಂದಿರುವ ಕೆರೆಗಳನ್ನು ನಿರ್ವಹಿಸಲು ಸನ್ನದ್ಧರಾಗಬೇಕಾಗಿದೆ. ಹಳ್ಳಿಯ ನಿವಾಸಿಗಳು ಸ್ವಯಂಪ್ರೇರಣೆಯಿಂದ ಮುಂದೆ ಬಂದು ಕಾರ್ಯಪ್ರವೃತ್ತರಾಗಿ ಕೆರೆಗಳ ಹೂಳನ್ನು ತಮ್ಮ ಹೊಲಗಳಿಗೆ ಕೊಂಡೊಯ್ದರೆ ಅತ್ತ ಹೊಲಗಳೂ ಸಮೃದ್ಧವಾಗುತ್ತವೆ ಇತ್ತ ಕೆರೆಗಳೂ ಸ್ವಚ್ಛವಾಗುತ್ತವೆ. ಈ ದಿಸೆಯಲ್ಲಿ ಸಿಖ್ಖ್ ಮತಾವಲಂಬಿಗಳ ಶ್ರಮದಾನ ನಮ್ಮ ನಾಡಿಗೆ ಮಾದರಿಯಾಗಿದೆ. ◆